**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** COVID-19 ಸಾಂಕ್ರಮಿಕ ರೋಗವನ್ನು ನಿಯಂತ್ರಿಸಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ರೂ.86.25ಕೋಟಿ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** ನವದೆಹಲಿಯ ಕೇಂದ್ರೀಯ ಗೃಹ ಮಂತ್ರಾಲಯದ ಆದೇಶ ಸಂಖ್ಯೆ:33-4/2020-NDM-I, ದಿನಾಂಕ:14-3-2020.

*****

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಮಿಕ ರೋಗವು ವಿಶ್ವಾದ್ಯಂತ ಪಸರಿಸಿದೆ. ಭಾರತ ದೇಶದಲ್ಲೂ ಸಹ ಹರಡಿದೆ. ಹಾಗೆಯೇ ಕರ್ನಾಟಕ ರಾಜ್ಯದಲ್ಲೂ ಹರಡುತ್ತಿದೆ. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರೀಯ ಗೃಹ ಮಂತ್ರಾಲಯವು ಮಾರ್ಗಸೂಚಿ/ಆದೇಶಗಳನ್ನು ಹೊರಡಿಸಿದೆ.

ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕೇಂದ್ರಿಯ ಗೃಹ ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿ/ಆದೇಶಗಳನುಸಾರ ಕರ್ನಾಟಕ ರಾಜ್ಯ ಸರ್ಕಾರವು ಕ್ರೋಢಿಕೃತ ಹಾಗೂ ಪರಿಷ್ಕೃತ ಮಾರ್ಗಸೂಚಿಗಳನ್ನು ಆದೇಶ ಸಂಖ್ಯೆ:ಕಂಇ/158/ಟಿಎನ್ಆರ್/2020ರಲ್ಲಿ ಹೊರಡಿಸಿದೆ, ಸದರಿ ಆದೇಶವು ದಿನಾಂಕ:23-4-2020ರಿಂದ ಜಾರಿಯಲ್ಲಿರುತ್ತದೆ.

ಕೇಂದ್ರಿಯ ಗೃಹ ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿ/ಆದೇಶಗಳನ್ವಯ, ಅನುದಾನ ಅವಶ್ಯಕತೆಯ ಮಾಹಿತಿಯನ್ನು Google Spread Sheet ಮೂಲಕ ನಮೂದಿಸಲು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ, ಜಿಲ್ಲಾಧಿಕಾರಿಗಳು ಒಟ್ಟು ರೂ.8625.27 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರುತ್ತಾ Google Spread Sheet ರಲ್ಲಿ ವಿವರಗಳನ್ನು ಸಲ್ಲಿಸಿರುತ್ತಾರೆ. ಸದರಿ ವಿವರಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರೂ.8625.27 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 194 ಟಿಎನ್ಆರ್ 2020; ಬೆಂಗಳೂರು, ದಿನಾಂಕ:29-04-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕೋವಿಡ್-19 ಸಾಂಕ್ರಮಿಕ ರೋಗ ಹರಡುವುದನ್ನು ನಿಯಂತ್ರಿಸಲು ರಾಜ್ಯ ವಿಪತ್ತು ನಿರ್ವಹಣಾ ನಿಧಿಯಡಿಯಿಂದ ರೂ.8625.27 ಲಕ್ಷಗಳನ್ನು ಕೆಳಕಂಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ:

(Rs.in Lakhs)

| Sl. No | Districts | Amount Released for Relief Measures (provision for temporary accommodation, food, clothing, etc) | Amount Released for measures for quarantine, sample collection and screening | Amount Released for Procurement of essential equipments to labs for response to COVID 19 | Total Amount |
|---|---|---|---|---|---|
| 1 | ಬಾಗಲಕೋಟೆ | 90.00 | 75.00 | 120.00 | 285.00 |
| 2 | ಬಳ್ಳಾರಿ | 10.00 | 60.00 | 230.00 | 300.00 |
| 3 | ಬೆಳಗಾವಿ | 362.00 | 50.00 | 25.00 | 437.00 |
| 4 | ಬೆಂಗಳೂರು ನಗರ | 500.00 | 250.00 | 250.00 | 1000.00 |
| 5 | ಬೆಂಗಳೂರು ಗ್ರಾಮಾಂತರ | 200.00 | 0.00 | 0.00 | 200.00 |
| 6 | ಬೀದರ್ | 100.00 | 50.00 | 100.00 | 250.00 |
| 7 | ಚಾಮರಾಜನಗರ | 50.00 | 45.00 | 0.00 | 95.00 |
| 8 | ಚಿಕ್ಕಮಗಳೂರು | 10.00 | 30.00 | 273.65 | 313.65 |
| 9 | ಧಾರವಾಡ | 14.04 | 125.58 | 110.00 | 249.62 |
| 10 | ಗದಗ | 70.00 | 10.00 | 5.00 | 85.00 |
| 11 | ಹಾಸನ | 15.00 | 15.00 | 20.00 | 50.00 |
| 12 | ಹಾವೇರಿ | 100.00 | 50.00 | 500.00 | 650.00 |
| 13 | ಕಲಬುರಗಿ | 500.00 | 200.00 | 250.00 | 950.00 |
| 14 | ಉತ್ತರ ಕನ್ನಡ | 100.00 | 200.00 | 200.00 | 500.00 |
| 15 | ಕೋಲಾರ | 15.00 | 0.00 | 0.00 | 15.00 |
| 16 | ಕೊಪ್ಪಳ | 15.00 | 10.00 | 60.00 | 85.00 |
| 17 | ಕೊಡಗು | 200.00 | 400.00 | 400.00 | 1000.00 |
| 18 | ಮಂಡ್ಯ | 15.00 | 10.00 | 50.00 | 75.00 |
| 19 | ದಕ್ಷಿಣ ಕನ್ನಡ | 150.00 | 50.00 | 90.00 | 290.00 |
| 20 | ರಾಯಚೂರು | 15.00 | 20.00 | 0.00 | 35.00 |
| 21 | ರಾಮನಗರ | 30.00 | 50.00 | 150.00 | 230.00 |
| 22 | ಶಿವಮೊಗ್ಗ | 40.00 | 40.00 | 100.00 | 180.00 |
| 23 | ತುಮಕೂರು | 100.00 | 200.00 | 200.00 | 500.00 |
| 24 | ಉಡುಪಿ | 40.00 | 60.00 | 350.00 | 450.00 |
| 25 | ವಿಜಯಪುರ | 125.00 | 75.00 | 100.00 | 300.00 |
| 26 | ಯಾದಗಿರಿ | 50.00 | 50.00 | 0.00 | 100.00 |
| | **ಒಟ್ಟು** | **2916.04** | **2125.58** | **3583.65** | **8625.27** |

**(ಎಂಟು ಸಾವಿರದ ಆರುನೂರ ಇಪ್ಪತ್ತೈದು ಲಕ್ಷ ಇಪತ್ತೇಳು ಸಾವಿರ ರೂಪಾಯಿಗಳು ಮಾತ್ರ)**

**ಷರತ್ತುಗಳು:**

1) ಮೇಲಿನಂತೆ ಬಿಡುಗಡೆಯಾದ ಮೊತ್ತವನ್ನು ಕೇಂದ್ರ ಸರ್ಕಾರ ಕೋವಿಡ್-19 ರೋಗಾಣುವನ್ನು ತಡೆಗಟ್ಟಲು ಹೊರಡಿಸಿರುವ ಮಾರ್ಗಸೂಚಿಯಂತೆ ವೆಚ್ಚ ಭರಿಸುವುದು.
2) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸಿಕೊಳ್ಳತಕ್ಕದ್ದು ಹಾಗೂ ಅನುದಾನ ವೆಚ್ಚ ಮಾಡಿದ್ದಕ್ಕೆ ಸಂಬಂಧಿಸಿದಂತೆ ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3) ಹಣ ಬಳಕೆಯಲ್ಲಿ ಯಾವುದೇ ಲೋಪವಾದಲ್ಲಿ ಆಯಾ ಜಿಲ್ಲಾಧಿಕಾರಿಯವರನ್ನೇ ನೇರವಾಗಿ ಜವಾಬ್ದಾರನ್ನಾಗಿ ಮಾಡಲಾಗುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಪರವಾಗಿ ಸರ್ಕಾರ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3) ಇವರು ಪೇಯೀಸ್ ರಸೀದಿ ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆ "2245-80-102-0-01-059" ಅಡಿಯಲ್ಲಿ ಡ್ರಾ ಮಾಡಿ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಗೆ ಜಮಾ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 214 ವೆಚ್ಚ-7 2020, ದಿನಾಂಕ:17-4-2020 ಹಾಗೂ ಸಂಖ್ಯೆ:ACS/FD/1267, ದಿನಾಂಕ:28-4-2020 ರನ್ವಯ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/4

(ಕೆ.ಉಮಾಪತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ನೋಂ & ಮು).

1) ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಪಿ.ಬಿ.ನಂ. 5329/5369 ಪಾರ್ಕ್ ಹೌಸ್ ರೋಡ್, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಪಿ.ಬಿ.ನಂ.5398, ನ್ಯೂ ಬಿಲ್ಡಿಂಗ್ 'ಆಡಿಟ್ ಭವನ' ಬೆಂಗಳೂರು.
3) ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಪಿ.ಬಿ.ನಂ.5398, ನ್ಯೂ ಬಿಲ್ಡಿಂಗ್ 'ಆಡಿಟ್ ಭವನ' ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು (ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ ಹಾಗೂ ಮೈಸೂರು ಜಿಲ್ಲೆ ಹೊರತು ಪಡಿಸಿ)

5) ಜಂಟಿ ನಿರ್ದೇಶಕರು, ರಾಜ್ಯ ಹುಜುರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6) ಜಂಟಿ ನಿರ್ದೇಶಕರು, ಟಿಎನ್‌ಎಂಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಉಪ ನಿರ್ದೇಶಕರು, ಖಜಾನೆ ನೆಟ್ ವರ್ಕ್ ಮ್ಯಾನೇಜ್ ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
8) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು (ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ ಹಾಗೂ ಮೈಸೂರು ಜಿಲ್ಲೆ ಹೊರತು ಪಡಿಸಿ).

**ಪ್ರತಿ:**

1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಸಹಾಯಕರು.
4) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-7, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5) ಕಂದಾಯ ಇಲಾಖೆ (ವಿ.ನಿ) ಲೆಕ್ಕ ಪತ್ರ ಶಾಖೆ.
6) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.